NWKRTC-TRFD/1/2022-TRFD

I/26478/2022

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-560 027**

ಸಂ:ಕರಾಸಾ:ಕೇಕ:ಸಂ:ಸಿ3: 1386 :2022-23 ದಿನಾಂಕ:19.10.2022

**ಸುತ್ತೋಲೆ ಸಂಖ್ಯೆ : 1717 /2022**

ವಿಷಯ : ಸಾಂದರ್ಭಿಕ ಒಪ್ಪಂದದ ಮೇಲೆ ಬಸ್ಸುಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ : 1. ಸಾಮಾನ್ಯ ಸ್ಥಾಯಿ ಆದೇಶ ಸಂ : 793/ 2018 ದಿನಾಂಕ 21.04.2018.
2. ಸಾಮಾನ್ಯ ಸ್ಥಾಯಿ ಆದೇಶ ಸಂ : 795 /2018 ದಿನಾಂಕ 07.11.2018.
3. ಸುತ್ತೋಲೆ ಸಂಖ್ಯೆ : 1485 /2019 ದಿನಾಂಕ 12.04.2019.
4. ಸುತ್ತೋಲೆ ಸಂಖ್ಯೆ : 1522 /2019 ದಿನಾಂಕ 09.12.2019
5. ಸುತ್ತೋಲೆ ಸಂಖ್ಯೆ : 1526/ 2019 ದಿನಾಂಕ 01.01.2020.
6. ಸುತ್ತೋಲೆ ಸಂಖ್ಯೆ : 1576 /2020 ದಿನಾಂಕ 06.11.2020
7. ಸುತ್ತೋಲೆ ಸಂಖ್ಯೆ : 1584 /2020 ದಿನಾಂಕ 16.12.2020.
8. ಸುತ್ತೋಲೆ ಸಂಖ್ಯೆ : 1589 /2021 ದಿನಾಂಕ 05.01.2021
9. ಸುತ್ತೋಲೆ ಸಂಖ್ಯೆ : 1697/2022 ದಿನಾಂಕ 16.05.2022.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸಾಂದರ್ಭಿಕ ಒಪ್ಪಂದದ ಮೇಲೆ ಬಸ್ಸುಗಳನ್ನು ಒದಗಿಸುತ್ತಿದ್ದು, ಈ ಸಂಬಂಧದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳ ಬಗ್ಗೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶ ಹಾಗೂ ಸುತ್ತೋಲೆಗಳಲ್ಲಿ ತಿಳಿಸುತ್ತಾ ಬರಲಾಗಿದೆ.

ಮುಂದುವರೆದು, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 793 ದಿನಾಂಕ 21.04.2018 ರಲ್ಲಿನ ಕ್ರ.ಸಂ. III(7) ರಲ್ಲಿ ಒಪ್ಪಂದದ ಅವಧಿ ಮುಂದೂಡಿಕೆ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿರುತ್ತದೆ. ಪ್ರಸ್ತುತ ಒಪ್ಪಂದವನ್ನು ಮುಂಗಡವಾಗಿ ಬುಕಿಂಗ್‌ಗೊಳಿಸಿದ್ದು, ನಿಗದಿತ ದಿನಾಂಕಕ್ಕಿಂತ ಮುಂಚಿತವಾಗಿ ಬಸ್ಸುಗಳ ಆಚರಣೆ ಮಾಡಲು ಕೋರಿದ್ದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶನಗಳಿರುವುದಿಲ್ಲ. ಸಾರ್ವಜನಿಕರಿಂದ ಈ ತರಹದ ಬೇಡಿಕೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಬಸ್ಸುಗಳನ್ನು ಸಾಂದರ್ಭಿಕ ಒಪ್ಪಂದದ ಮೇಲೆ ಮುಂಗಡವಾಗಿ ಬುಕಿಂಗ್‌ಗೊಳಿಸಿದ್ದು, ಕಾರಣಾಂತರಗಳಿಂದ ಹಿಂದೂಡಲು ಇಚ್ಛಿಸಿದಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು.

update

**ಒಪ್ಪಂದದ ಅವಧಿ ಹಿಂದೂಡಿಕೆ :(Preponement)**

1. ಒಪ್ಪಂದದಾರರು ಒಪ್ಪಂದದ ಅವಧಿಯನ್ನು ಹಿಂದೂಡುವಂತೆ ಕೋರಿದಲ್ಲಿ ಒಂದು ಬಾರಿಗೆ ಮಾತ್ರ ಕೋರಿಕೆಯನ್ನು ಪರಿಗಣಿಸಬಹುದಾಗಿದೆ. ಒಪ್ಪಂದದಾರರು ಇಂತಹ ಕೋರಿಕೆಗಳನ್ನು ಬಸ್ಸು ಆಚರಣೆಗೆ ಕೋರಿರುವ ಒಂದು ದಿನ ಮುಂಚಿತವಾಗಿ ಅಂದರೆ 24 ಗಂಟೆಗಳ ಮುಂಚಿತವಾಗಿ ಲಿಖಿತವಾಗಿ ಸಂಬಂಧಪಟ್ಟವರಿಗೆ ತಿಳಿಸಬೇಕಿರುತ್ತದೆ.
2. ಅಂತರರಾಜ್ಯ ಒಪ್ಪಂದಗಳಲ್ಲಿ ಹಿಂದೂಡಿದ ದಿನಾಂಕಗಳಿಗೆ ಪರ್ಮಿಟ್ ಪಡೆಯಲು ತಗಲುವ ಹೆಚ್ಚುವರಿ ವೆಚ್ಚವನ್ನು ಒಪ್ಪಂದದಾರರೇ ಭರಿಸುವುದು.

CMM update in website 21/7

**ಬಸ್ಸಿನ ವರ್ಗವನ್ನು ಉನ್ನತೀಕರಣಗೊಳಿಸುವ ಬಗ್ಗೆ: (Upgradation of service)**

1. ಪ್ರಸ್ತುತ ಸಾರ್ವಜನಿಕರಿಗೆ ನಿಗಮದಲ್ಲಿ ಆಚರಣೆಯಲ್ಲಿರುವ ಬಹುತೇಕ ಎಲ್ಲಾ ಬಸ್ಸುಗಳನ್ನು ಒದಗಿಸಲು ಅವಕಾಶ ನೀಡಲಾಗಿದೆ.



ಒ.ನೋ.ಸಂ 961 ದಿನಾಂಕ 21/10/22

Scanned with OKEN Scanner

೨. ಒಂದು ವೇಳೆ ಒಪ್ಪಂದದಾರರು ಈಗಾಗಲೇ ಒಂದು ವರ್ಗದ ಬಸ್ಸನ್ನು ಮುಂಗಡವಾಗಿ ಸಾಂದರ್ಭಿಕ ಒಪ್ಪಂದದ ಮೇಲೆ ಬುಕಿಂಗ್ ಮಾಡಿದ್ದು, ಮತ್ತೆ ಕಡಿಮೆ ದರ್ಜೆಯ ಬಸ್ಸಿನಿಂದ ಮೇಲ್ದರ್ಜೆಯ ಬಸ್ಸಿಗೆ ಒಪ್ಪಂದವನ್ನು ವರ್ಗಾಯಿಸಲು ಇಚ್ಛಿಸಿದಲ್ಲಿ ಒಂದು ಬಾರಿಗೆ ಮೇಲ್ದರ್ಜೆಯ ಬಸ್ಸನ್ನು ಬದಲಾವಣೆಗೊಳಿಸಿ ಆಚರಣೆಗೊಳಿಸಲು ಕ್ರಮವಹಿಸುವುದು. ಹೆಚ್ಚುವರಿ ಮೊತ್ತವನ್ನು ಲೆಕ್ಕಾಚಾರ ಮಾಡಿ ಒಪ್ಪಂದದಾರರಿಂದ ಪಾವತಿಸಿಕೊಳ್ಳುವುದು. ಈ ಅವಕಾಶವನ್ನು ಸಹ ಒಂದು ಬಾರಿಗೆ ಮಾತ್ರ ನೀಡುವುದು.

೩. ಮೇಲ್ದರ್ಜೆಯ ಬಸ್ಸನ್ನು ಮುಂಗಡವಾಗಿ ಬುಕಿಂಗ್ ಮಾಡಿ, ಕೆಳದರ್ಜೆಯ ಬಸ್ಸಿಗೆ ವರ್ಗಾವಣೆಯಾಗಲು ಅವಕಾಶವಿರುವುದಿಲ್ಲ.

**ಅವಘಡ / ಅಪಘಾತ ಸಂದರ್ಭಗಳಲ್ಲಿ ಬದಲಿ ವಾಹನ ವ್ಯವಸ್ಥೆಗೊಳಿಸುವುದು :** ಸಾ.ಸ್ಥಾ.ಆದೇಶ ಸಂ. 793 ರಲ್ಲಿ III(6) ರಲ್ಲಿ ವಿವರವಾಗಿ ತಿಳಿಸಲಾಗಿರುತ್ತದೆ. ಇಂತಹ ಪ್ರಕರಣಗಳು ನಡೆದಾಗ ಸಾಂದರ್ಭಿಕ ಒಪ್ಪಂದದ ಮೇಲೆ ಬುಕಿಂಗ್ ಆದ ವಾಹನ ಲಭ್ಯವಿಲ್ಲದೇ ಇದ್ದಾಗ, ಕಡಿಮೆ / ಹೆಚ್ಚಿನ ದರ್ಜೆಯ ವಾಹನಗಳನ್ನು ಒದಗಿಸಬೇಕಾದ ಸಂದರ್ಭ ಬಂದಾಗ ಪ್ರಯಾಣಿಕರಿಗೆ ಈ ಮೊದಲು ಒದಗಿಸಿದ ಬಸ್ಸು ಆಚರಣೆಗೊಳಿಸಿದ ಕಿ.ಮೀ ಹಾಗೂ ಒದಗಿಸಲಾದ ಬದಲಿ ವಾಹನದ ಸಾಂದರ್ಭಿಕ ಒಪ್ಪಂದದ ಆಚರಣೆಯಾದ ಕಿ.ಮೀಗಳನ್ವಯ ಬಿಲ್ಲನ್ನು ತಯಾರಿಸುವುದು ಹಾಗೂ ಅದರಂತೆ ಮೊತ್ತ ಕಡಿತಗೊಳಿಸುವುದು. ಮೇಲ್ಕಂಡ ಮಾರ್ಪಾಡು ಆದೇಶಗಳು ದಿನಾಂಕ 01-10-2022 ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ಬರಲಿದೆ.

ಇನ್ನುಳಿದಂತೆ ಈಗಾಗಲೇ ಜಾರಿಗೊಳಿಸಿರುವ ಆದೇಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸುತ್ತೋಲೆ ಜಾರಿಗೊಳಿಸಿದ ಬಗ್ಗೆ ತಪ್ಪದೇ ಸ್ವೀಕೃತಿಯನ್ನು ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು

<u>ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಹುಬ್ಬಳ್ಳಿ</u>
(ಸಂಚಾರ ಇಲಾಖೆ)

ಕ.ರಾ.ರ.ಸಾ.ನಿಗಮದಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ:1717/2022 ದಿ:19/10/2022ನ್ನು ಯಥಾವತ್ತಾಗಿ ವಾಕರಸಾ ಸಂಸ್ಥೆಯಲ್ಲಿ ಅಳವಡಿಸಿಕೊಳ್ಳಲು ತಿಳಿಸಿದೆ.

<u>ಪ್ರತಿಯನ್ನು:ಆ.ಮೂ.ವಾಗಿ:-</u>

1. ಎಲ್ಲ ವಿಭಾಗೀಯ ನಿಯಂತ್ರಣಾಧಿಕಾರಿಗಳು ವಾ.ಕ.ರ.ಸಾ:ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಮೇಲಿನಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
2. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆ.ಸ., ವಾ.ಕ.ರ.ಸಾ:ಸಂಸ್ಥೆ: ಕೇಂದ್ರ ಕಛೇರಿ, ಹುಬ್ಬಳ್ಳಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮುಖ್ಯ ಗಣಕ ವ್ಯವಸ್ಥಾಪಕರು, ವಾ.ಕ.ರ.ಸಾ:ಸಂಸ್ಥೆ: ಕೇಂದ್ರ ಕಛೇರಿ, ಹುಬ್ಬಳ್ಳಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಉಗ್ರಾಣ ಮತ್ತು ಖರೀದಿ ನಿಯಂತ್ರಕರು, ವಾ.ಕ.ರ.ಸಾ:ಸಂಸ್ಥೆ: ಕೇಂದ್ರ ಕಛೇರಿ, ಹುಬ್ಬಳ್ಳಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ವಾ.ಕ.ರ.ಸಾ:ಸಂಸ್ಥೆ: ಕೇಂದ್ರ ಕಛೇರಿ, ಹುಬ್ಬಳ್ಳಿರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6. ಮಾನ್ಯ ಅಧ್ಯಕ್ಷರ/ವ್ಯವಸ್ಥಾಪಕ ನಿರ್ದೇಶಕರ ಆಪ್ತಕಾರ್ಯದರ್ಶಿಗಳು, ವಾ.ಕ.ರ.ಸಾಸಂಸ್ಥೆ, ಕೇಂದ್ರ ಕಛೇರಿ ಹುಬ್ಬಳ್ಳಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

Signed by Rajesh Huddar
Date: 20-10-2022 18:11:15
ಮುಖ್ಯ ಸಂಚಾರ ವ್ಯವಸ್ಥಾಪಕರು

Scanned with OKEN Scanner